# ವಸಂತ ಸಂಭವ

'ವಸಂತ ಸಂಭವ' ಎಂದರೆ ವಸಂತ ಮಾಸದ ಹುಟ್ಟು ಎಂದರ್ಥ. ಶರದೃತುವಿನ ನಂತರ ವಸಂತ ಬರುತ್ತದೆ. 'ವಸಂತ ಎನ್ನುವುದು ಬಹುಸಾಧ್ಯತೆಗಳ ಪ್ರಕೃತಿಯ ಬೀಜವಿದ್ದಂತೆ. ನಿಸರ್ಗದ ಹೃದಯದಿಂದ ಉಕ್ಕುವ ಚೈತನ್ಯದ ಎಲೆಗಳಂತೆ'. ವಸಂತವೇ ಎಲ್ಲ ಋತುಗಳ ರಾಜ ಎಂದು ಕವಿಗಳು ಹೇಳುತ್ತಾರೆ. 'ವಸಂತವು ಮನ್ಮಥನ ಸಖನಂತೆ' ಎಂದು ಕಾಳಿದಾಸ ಹೇಳಿದ್ದಾನೆ. ಅವನ ಮೊದಲ ಕೃತಿ 'ಋತು ಸಂಹಾರ'ವಂತೂ ಋತುಗಳ ಸನ್ನಿವೇಶಗಳನ್ನೇ ಕೇಂದ್ರವಾಗಿಟ್ಟುಕೊಂಡು ರಚಿತವಾಗಿದೆ.

ಭೂಮಿ ಅನುಭವಿಸಿದ ಉರಿಬಿಸಿಲಿನ ತಾಪಕ್ಕೆ ಕರಗಿ ನೀರಾಗುವ ಕಲ್ಲುಬಂಡೆ, ಕಾದ ದೂಳು, ಬತ್ತಿಹೋದ ನೀರಿನ ಮೂಲಗಳು, ಬಾಯಾರಿದ ಜೀವಜಾಲ ಇದರ ಜೊತೆಗೆ ಕಾಡ್ಗಿಚ್ಚು ಇವೆಲ್ಲವೂ ಭೂಮಿಯನ್ನು ಇನ್ನಿಲ್ಲದಂತೆ ಬಸವಳಿಯುವಂತೆ ಮಾಡುತ್ತಿರುತ್ತವೆ. ಇಂತಹ ದಣಿದ ವೇಳೆಯಲ್ಲಿಯೇ ಭೂಮಿ ಆಕಾಶಕ್ಕೆ ಮೊರೆಯಿಡುತ್ತದೆ. ಈ ಮೊರೆ ಕೇಳಿಯೇ ಪ್ರಕೃತಿ ಭೂಮಿಯನ್ನು ತಣಿಸಲೆಂದು ವಸಂತವನ್ನು ಧರೆಗೆ ಕಳುಹಿಸಿಕೊಡುತ್ತದೆ. ಬೆಳಗ್ಗೆ ಎದ್ದು ನೋಡಿದಾಗ ಬರಿದಾಗಿದ್ದ ವೃಕ್ಷಗಳು ಪಾರದರ್ಶಕದಂತಿರುವ ಚಿಗುರು ಮತ್ತು ಹೂವುಗಳನ್ನು ಧರಿಸಿ, ಪ್ರಕೃತಿಗೆ ಚೈತನ್ಯ ನೀಡಲು ಈಗ ತಾನೆ ಮುಗುಳುನಗುತ್ತಾ ಆಗಮಿಸುತ್ತಿರುವ ನವವಧುವರರಂತೆ ಕಾಣುತ್ತದೆ. ವಸಂತ ಮಾಸದಲ್ಲಿ ಪ್ರಕೃತಿಯಲ್ಲಾಗುವ ಇಂತಹ ಚಮತ್ಕಾರಗಳನ್ನು ನೋಡಿಯೇ ಅನೀಸ್ ಎಂಬ ಲಖನೌ ಮೂಲದ ಉರ್ದು ಕವಿ (1802–1874) ಹೇಳಿದ 'ಹೂಮೊಗ್ಗೆಗಳರಳಿವೆ, ಸ್ವರ್ಗದ ಮಂದಮಾರುತವು ಪರಿಮಳವನ್ನು ಹರಡುತ್ತ ಬೀಸುತ್ತಲಿದೆ. ತೋಟದಿಂದ ಲಜ್ಜಿತವಾಗಿ ಶರದೃತು ಹೊರಟುಹೋಗಲಿದೆ. ನಾನು ಬಂದಿದ್ದೇನೆ. ವನದ ಸೌಂದರ್ಯವೇ ಬೇರೆಯಾಗಿದೆ. 'ನೀನೆಲ್ಲಿ ಹೊರಟೆ?' ಎಂದು ಶರದೃತುವನ್ನು ವಸಂತ ಋತು ಕೇಳುತ್ತದೆ'. 'ಉದಯದ ಸಮಯ, ಹೂವುಗಳ ಮೇಲೆ ಮಂಜು ಮುತ್ತುಗಳನ್ನು ಸುರಿಸುತ್ತಲಿದೆ. ಬೆಳದಿಂಗಳಲ್ಲಿ ಮುತ್ತುಗಳನ್ನು ಹಾಸಿದಂತೆ ಕಾಣುತ್ತಲಿದೆ. ಗಂಭೀರವಾದ ಮಂದಮಾರುತ ನಡಿಗೆ, ಪಕ್ಷಿಗಳ ಧ್ವನಿ, ಫಲಗಳ ಸಮೂಹ, ಕೋಗಿಲೆಗಳ ಸಂತೋಷ ಇವನ್ನೆಲ್ಲ ಕೇಳುವುದೇನು, ಭೂಮಿ ಸ್ವರ್ಗದಂತೆ ಕಾಣುತ್ತದೆ'. ಇಂಥ ವಸಂತ ಋತುವನ್ನು ಕುರಿತು ರೂಮಿ ಹೇಳಿದ 'ವಸಂತ ಬರದೆ ಮೊಗ್ಗುಗಳೂ ಅರಳುವುದಿಲ್ಲ'.

'ಹೊಸ ಹೂವಿನ ಕಂಪು ಹಸುರು / ಎಲರಿನ ತಂಪೂ ಹಸುರು / ಹಕ್ಕಿಯ ಕೊರಲಿಂಪೂ ಹಸುರು' ಈ ಜಗಹೃದಯ ಆನಂದಮಯವಾಗುವುದು ಇಂತಹ ದಿವ್ಯ ಗಳಿಗೆಯಲ್ಲಿಯೇ ಎಂದು ಕುವೆಂಪು ಉದ್ಗರಿಸುತ್ತಾರೆ. ಕವಿಗಳಿಗೆ ದಾರ್ಶನಿಕರಿಗೆ ಪ್ರಕೃತಿಯ ಇಂತಹ ಸಾನ್ನಿಧ್ಯವೇ ಕಲಿಕಾ ಶಾಲೆಯಿದ್ದಂತೆ. ನಾಲ್ಕು ಗೋಡೆಗಳ ಒಳಗೆ ಪಡೆಯುತ್ತಿದ್ದ ಶಿಕ್ಷಣದಿಂದ ವಿಮೋಚನೆ ಪಡೆದು ಅಂಕೆಗಳಿಲ್ಲದ ನಿಸರ್ಗದ ನಿರ್ಬಯಲಲ್ಲಿ ತಾನು ಹೇಗೆ ವಿಭಿನ್ನವಾಗಿ ಕಲಿತೆ ಎಂಬುದನ್ನು ಗುರುದೇವ ರವೀಂದ್ರರು ಹೀಗೆ ಹೇಳುತ್ತಾರೆ: 'ನಮ್ಮ ಮನೆಗೆ ಅಂಟಿದಂತೆ ಒಂದು ಪುಟ್ಟ ತೋಟವಿತ್ತು. ಅದು ನನ್ನ ಪಾಲಿಗೆ ಸೌಂದರ್ಯದ ಪವಾಡಗಳು ನಿತ್ಯವೂ ನಡೆಯುವ ಯಕ್ಷಲೋಕವಾಗಿತ್ತು. ಪ್ರತಿದಿನವೂ ಬೆಳಗಿನ ಮಬ್ಬಿನಲ್ಲಿ ತೋಟದ ಎಲ್ಲೆಯುದ್ದಕ್ಕೂ ಸಾಲಾಗಿ ನಿಂತ ತೆಂಗಿನಮರಗಳ ಅಲುಗುವ ಗರಿಗಳ ಮೂಲಕ ತೂರಿಬರುವ ಅರುಣೋದಯದ ಪ್ರಥಮ ಕಾಂತಿಯನ್ನು ಸ್ವಾಗತಿಸಲು ಆತುರದಿಂದ ಧಾವಿಸುತ್ತಿದೆ.

ಬೆಳಗಿನ ಗಾಳಿಯ ಪ್ರಥಮ ಕಂಪನದಲ್ಲಿ ಹಿಮಮಣಿಗಳನ್ನು ತಳೆದ ಹುಲ್ಲು ಮಿರುಗುತ್ತಿತ್ತು. ಆಕಾಶವು ವೈಯಕ್ತಿಕ ಸ್ನೇಹದ ಕರೆಯನ್ನು ನನಗೆ ನೀಡುವಂತೆ ಕಾಣುತ್ತಿತ್ತು ಮತ್ತು ನನ್ನ ಹೃದಯವೆಲ್ಲ – ಅಷ್ಟೇಕೆ, ಇಡೀ ದೇಹವೆಲ್ಲ – ತುಂಬಿತುಳುಕುವ ಆ ಬೆಳಕನ್ನೂ, ಮೌನ ಮುಹೂರ್ತದ ಶಾಂತಿಯನ್ನೂ ಒಂದೇ ಗುಟುಕಿಗೆ ಪಾನಮಾಡುತ್ತಿತ್ತು. ಒಂದು ಪ್ರಭಾತವನ್ನೂ ಕಳೆದುಕೊಳ್ಳದಿರಲು ನಾನು ಉತ್ಸುಕನಾಗಿದ್ದೆ. ಏಕೆಂದರೆ ಪ್ರತಿಯೊಂದು ಪ್ರಾತಃಕಾಲವೂ ನನ್ನ ಪಾಲಿಗೆ ಅಮೂಲ್ಯವಾಗಿತ್ತು. ಕೃಪಣನಿಗೆ ಹೊನ್ನು ಹೇಗೋ ಅದಕ್ಕಿಂತ ಹೆಚ್ಚು ಅಮೂಲ್ಯವಾಗಿತ್ತು. ಹೃದಯದಲ್ಲಿರುವ ರಹಸ್ಯ ಭಂಡಾರಕ್ಕೆ ನೇರ ಪ್ರವೇಶವನ್ನು ಕಲ್ಪಿಸಿಕೊಡುವ ವಿಸ್ಮಯಭಾವ ನನಗೆ ಲಭಿಸಿತು. ನಾನು ಅಧ್ಯಯನವನ್ನು ಕಡೆಗಾಣಿಸಿದೆ. ಏಕೆಂದರೆ ಅದು ನನಗೆ ಮಿತ್ರನಾಗಿದ್ದ ಸುತ್ತಣ ಪ್ರಪಂಚದಿಂದ ನನ್ನನ್ನು ಕ್ರೂರವಾಗಿ ಹೊರಗೆಳೆಯುತ್ತಿತ್ತು. ನಾನು ಹದಿಮೂರು ವರ್ಷದವನಾಗಿದ್ದಾಗ, ಪಾಠಗಳ ಕಲ್ಲುಗೋಡೆಗಳ ನಡುವೆ ನನ್ನನ್ನು ಸೆರೆಯಿಡಬಯಸಿದ ಶಿಕ್ಷಣ ಕ್ರಮದ ಮುಷ್ಟಿಯಿಂದ ಪಾರಾದೆ (ನನ್ನ ಜೀವನ: ರವೀಂದ್ರನಾಥ ಟ್ಯಾಗೋರ್).

ಕಾಳಿದಾಸನಿಗೆ, ಕವಿಗಳಿಗೆ, ಸೂಫಿಗಳಿಗೆ ಚೈತನ್ಯ ನೀಡಿದ ವಸಂತ ಋತು ಏಕೋ ಹೃದಯದ ತುಂಬಾ ಗಾಯಗಳನ್ನಿಟ್ಟುಕೊಂಡಿದ್ದ ಗಾಲಿಬನಿಗೆ ಒಲಿಯಲೇ ಇಲ್ಲ! ಇದಕ್ಕೆ ಅವನ ಕಾಲವೂ ಕಾರಣವಾಗಿದ್ದಿರಬಹುದು! ದಿಲ್ಲಿ ಸಾಮ್ರಾಜ್ಯದ ಅವನತಿ, ಉರಿವ ಬೆಂಕಿಯ ಮೇಲೆ ಕುಳಿತು ರಾಜ್ಯಭಾರ ಮಾಡುತ್ತಿದ್ದ ಅರಸರು, ದಿಲ್ಲಿಯ ಬೀದಿಗಳ ಮೇಲೆ ಚೆಲ್ಲಿದ ರಕ್ತ, ವೈಯಕ್ತಿಕ ಬದುಕಿನ ಯಾತನೆ, ಬರಗಾಲ, ಪ್ರವಾಹದಲ್ಲಿ ಆದ ಜೀವಹಾನಿ ಇದೆಲ್ಲವೂ ಅವನನ್ನು ನೈರಾಶ್ಯದ ಕಡಲಿನಲ್ಲಿ ಮುಳುಗಿಸಿತ್ತು. ಇದರಿಂದಾಗಿ ವಸಂತ ಋತು ಅವನಲ್ಲಿ ಹಿತೋಲ್ಲಾಸದ ಮಧುರ ನೆನಪುಗಳನ್ನೇ ಸುರಿಸಲಿಲ್ಲ. ಅದಕ್ಕೆಂದೇ ಗಾಲಿಬ್ ಹೇಳಿದ 'ನನ್ನ ಮನೆಗೆ ವಸಂತ ಋತು ಕಾಲಿರಿಸಿದೆ, ಆದರೆ ನಾನು ಖಿನ್ನನಾಗಿದ್ದೇನೆ'. 'ಸೂರ್ಯನ ಕಿರಣಗಳಿಂದ ಇಬ್ಬನಿ ಹನಿ ಸಾಯುವಂತೆ' ಗಾಲಿಬ್‌ನ ಹೃದಯ ವಸಂತದ ಸೌಂದರ್ಯಕ್ಕಿಂತ ದುಃಖದ ಹಾಡನ್ನು ಹಾಡುತ್ತಿತ್ತು. 'ವಸಂತ ಕಾಲ ಸರಿದುಹೋದರೆ ಹೋಗಲಿಬಿಡು / ಕಡೇಪಕ್ಷ ಹೂದೋಟದ ಹೊಸತನ / ತಂಗಾಳಿ ನೀಡುವ ಚೇತನದ ಬಗ್ಗೆ ಮಾತನಾಡು' ಎಂದು ಭಾರವಾದ ಹೃದಯದಿಂದ ಹಾಡಿದ.

ವಸಂತ ಋತುವಿನಲ್ಲೂ ಹಲವಾರು ಚಮತ್ಕಾರಗಳಿವೆ. ವೃಕ್ಷಗಳು ತಳೆದ ಚಿಗುರು, ಹೂಗಳು ಹಿಮಮಣಿಗಳಂತೆ. ಈ ಹೂಗೊಂಚಲುಗಳ ಸಾಲುಗಳು ವಾಚ್ಯವಾಗಿಯೂ ಇರುವುದಿಲ್ಲ, ಜಟಿಲವಾಗಿಯೂ ಇರುವುದಿಲ್ಲ! ಕವಿಗಳಿಗೆ, ದಾರ್ಶನಿಕರಿಗೆ, ಅನುಭಾವಿಗಳಿಗೆ, ಒಲಿದ ಹೃದಯಗಳಿಗೆ ಒಂದೊಂದು ರೂಪ ತೋರುವ ಹಲವು ಬಣ್ಣಗಳ, ಸುಗಂಧಗಳ ರೂಪಕಗಳೇ. ಇಂತಹ ಚಮತ್ಕಾರಗಳನ್ನು ನೋಡಿಯೇ ಕವಿ ಬೇಂದ್ರೆಯವರ ಕವಿತೆ ಕೇಳುತ್ತದೆ 'ವರುಷಕೊಂದು ಹೊಸತು ಜನ್ಮ / ಹರುಷಕೊಂದು ಹೊಸತು ನೆಲೆಯು / ಅಖಿಲ ಜೀವಜಾತಕೆ! / ಒಂದೆ ಒಂದು ಜನ್ಮದಲ್ಲಿ / ಒಂದೆ ಬಾಲ್ಯ ಒಂದೆ ಹರೆಯ / ನಮಗದಷ್ಟೆ ಏತಕೆ?'.

■ **ಜೆ.ವಿ. ಆನಂದಮೂರ್ತಿ**

## ಮಾತೇ ಮುತ್ತು

- ನನ್ನಲ್ಲಿ ದೊಡ್ಡವರಿಗೋಸ್ಕರ ಸಮಯ ಇಲ್ಲದಿರಬಹುದು. ಆದರೆ, ಮಕ್ಕಳಿಗಾಗಿ ನನ್ನ ಬಳಿ ಸಾಕಷ್ಟು ಸಮಯವಿದೆ.

  –ಜವಾಹರಲಾಲ್ ನೆಹರೂ

- ಯಾರು ರೋಗಿಯನ್ನು ಆರೈಕೆ ಮಾಡುತ್ತಾರೋ ಅವರು ನನಗೆ ಸೇವೆ ಮಾಡಿದಂತೆ.

  –ಗೌತಮ ಬುದ್ಧ

- ನೂರು ಸಾರಿ ಸೋತರೇನಂತೆ, ನೂರೊಂದು ಸಾರಿ ಬಿದ್ದರೇನಂತೆ, ಸೋಲು ಗೆಲುವಿನ ಮೆಟ್ಟಿಲು, ಬಿದ್ದರಲ್ಲವೇ ಎದ್ದು ಮೇಲೇರುವುದು.

  –ಕುವೆಂಪು

- ನನ್ನನ್ನು ಇಂದ್ರ ಚಂದ್ರ ದೇವೇಂದ್ರನೆಂದು ಹೊಗಳುವುದು ನನಗಿಷ್ಟವಿಲ್ಲ. ನಾನು ನಿಮ್ಮಂತೆ ಶ್ರೀಸಾಮಾನ್ಯ.

  –ಬಿ.ಆರ್. ಅಂಬೇಡ್ಕರ್

- ಈ ದೇಹವೇ ನಾವು ಎಂದು ಬಗೆದು, ಸ್ವರ್ಗ ದೂರದಲ್ಲಿ ಎಲ್ಲಿಯೋ ಇದೆ ಎಂದು ನಾವು ಭಾವಿಸುತ್ತೇವೆ. ಶಿವಲೋಕ ಹೋಗಬೇಕಾದ ಜಾಗವೇನೂ ಅಲ್ಲ. ನಿನ್ನ ಹೃದಯದಲ್ಲಲ್ಲದೆ ಅದು ಮತ್ತೆಲ್ಲಿಯೂ ಇಲ್ಲ.

  –ರಮಣ ಮಹರ್ಷಿ

- ಮನಸ್ಸಿನಲ್ಲಿ ಬಯಸಿದ ಮಾತ್ರಕ್ಕೆ ಕಾರ್ಯಸಾಧನೆ ಆಗಿಬಿಡುವುದಿಲ್ಲ.

  –ಸುಭಾಷಿತ